# ತಂತ್ರಜ್ಞಾನ ಮತ್ತು ಸೃಜನಶೀಲತೆಯ ಅವಸಾನ

**ಶುಭಾಂಗಿ ಅಶೋಕ ಕುಂಬಾರ್**

ಬಿ.ಎಸ್ಸಿ– 3ನೇ ಸೆಮಿಸ್ಟರ್, ಕೆ.ಎಲ್.ಇ ಸಂಸ್ಥೆಯ ಜಿ.ಐ. ಬಾಗೇವಾಡಿ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ನಿಪ್ಪಾಣಿ.

DOI: https://doi.org/10.5281/zenodo.17257895

## ABSTRACT:

ಮಾನವ ಸಮಾಜದ ಬೆಳವಣಿಗೆಯಲ್ಲಿ ತಂತ್ರಜ್ಞಾನ ಮಹತ್ವದ ಪಾತ್ರವಹಿಸಿದೆ. ಚಕ್ರದ ಅವಿಷ್ಕಾರದಿಂದ ಇಂದಿನ ಕೃತಕ ಬುದ್ಧಿಮತ್ತೆಯವರೆಗೆ ಪ್ರತಿಯೊಂದು ಹಂತವೂ ಮಾನವನ ಜೀವನವನ್ನು ಸುಲಭಗೊಳಿಸಿದೆ. ಆದರೆ ಇತ್ತೀಚಿನ ವರ್ಷದಲ್ಲಿ "ತಂತ್ರಜ್ಞಾನ ಸೃಜನಶೀಲತೆಯ ಅವಸಾನ" ಎಂಬ ಚರ್ಚೆ ಗಂಭೀರವಾಗಿ ನಡೆಯುತ್ತಿದೆ. ತಂತ್ರಜ್ಞಾನ ಎಂದರೆ ವೈಜ್ಞಾನಿಕ ಜ್ಞಾನವನ್ನು ಬಳಸಿ ವಸ್ತುಗಳು, ಯಂತ್ರಗಳು, ಉಪಕರಣಗಳು ಮತ್ತು ತಂತ್ರಗಳನ್ನು ಸೃಷ್ಟಿಸಿ ಹೊಸ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಅಸ್ತಿತ್ವದಲ್ಲಿರುವ ಪರಿಹಾರಗಳನ್ನು ಸುಧಾರಿಸಲು ಬಳಸುವ ಪ್ರಕ್ರಿಯೆಯಾಗಿದೆ. ಇಂದಿನ 21ನೇ ಶತಮಾನದ ಯುಗವನ್ನು ತಂತ್ರಜ್ಞಾನದ ಯುಗ ಎಂದು ಕರೆಯಲಾಗುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನವು ಮಾನವ ಬದುಕಿನಲ್ಲಿ ಅಪಾರ ಬದಲಾವಣೆಗಳನ್ನು ತಂದಿದೆ. ಒಂದು ಕಡೆ ತಂತ್ರಜ್ಞಾನದ ವೇಗದ ಬೆಳವಣಿಗೆಗಳು, ಮಾನವನ ಜೀವನವನ್ನು ಸುಗಮಗೊಳಿಸಿದರೆ, ಮತ್ತೊಂದು ಕಡೆ ಅದು ಮಾನವನ ಸಹಜ ಸೃಜನಶೀಲತೆಯನ್ನು ನಿಧಾನವಾಗಿ ಕುಗ್ಗಿಸುತ್ತಿರುವುದನ್ನು ಕಾಣಬಹುದು. ಇದು ಸಮಾಜದ ಪ್ರಗತಿಗೆ ಮತ್ತು ಮಾನವನ ಜೀವನ ಮಟ್ಟವನ್ನು ಸುಧಾರಿಸಲು ಸಹಾಯ ಮಾಡುತ್ತದೆ. ಆದರೆ ದೈನಂದಿನ ಕ್ರಿಯೆಗಳು, ಸಂವಹನ, ವಿದ್ಯೆ, ಕೆಲಸ, ಮನರಂಜನೆ ಎಲ್ಲವೂ ತಂತ್ರಜ್ಞಾನದಿಂದ ಪ್ರೇರೇಪಿತವಾಗಿದೆ. ಆದರೆ ಇದು ಮನುಷ್ಯನ ವಿಚಾರ ಶಕ್ತಿಯನ್ನು ಕಳೆದುಕೊಳ್ಳುವ ಹಾಗೆ ಮಾಡುತ್ತಿದೆ ಹಾಗೂ ಸಂಪನ್ಮೂಲಗಳ ಸವಕಳಿಯಂತಹ ನಕಾರಾತ್ಮಕ ಪರಿಣಾಮವನ್ನು ಉಂಟು ಮಾಡುತ್ತಿರುವ ರೀತಿಯನ್ನು ನಾವು ಕಾಣಬಹುದಾಗಿದೆ.

## KEYWORDS:

ತಂತ್ರಜ್ಞಾನ, ಸೃಜನಶೀಲತೆ, ಕಂಪ್ಯೂಟರ್, ಇಂಟರ್ನೆಟ್, ಮೊಬೈಲ್, ಕೃತಕ ಬುದ್ಧಿಮತ್ತೆ.

ಪ್ರಾರಂಭಿಕ ಆವಿಷ್ಕಾರಗಳು ಜೀವನದ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವಲ್ಲಿ ಮಹತ್ವವಾದವು. ಆದರೆ ಇಂದಿನ ದಿನಗಳಲ್ಲಿ ನಾವು ಕಂಡು ಬರುವ ತಂತ್ರಜ್ಞಾನದಲ್ಲಿ ಹೊಸತನವಿದೆ. ಹೆಚ್ಚಿನ ಆವಿಷ್ಕಾರಗಳು ಹಳೆಯ ತಂತ್ರಜ್ಞಾನಗಳ ಸುಧಾರಿತ ರೂಪಗಳಷ್ಟೇ. ಉದಾ : ಮೊಬೈಲ್ ಪೋನಿನ ಹೊಸ ಮಾದರಿಗಳು, ಕಂಪ್ಯೂಟರ್‌ಗಳ ವೇಗದ ನವೀಕರಣ ಇವು ಆಳವಾದ ಸೃಜನಶೀಲತೆಯ ಸಂಕೇತಗಳಲ್ಲ. ತಂತ್ರಜ್ಞಾನದ ವರ್ಣನೆ: ತಂತ್ರಜ್ಞಾನ ಎಂದರೆ ಸಾರ್ವಜನಿಕವಾಗಿ ಬಳಸುವ ಕೈಗೋಳಗಳನ್ನು, ವಿಧಾನಗಳನ್ನು, ಯಂತ್ರಗಳನ್ನು ಮತ್ತು ಸಾಫ್ಟ್‌ವೇರ್‌ಗಳನ್ನು ಬಳಸಿಕೊಂಡು ಮಾನವನ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಸಾಧನಗಳ ಒಂದು ಗುಂಪು. ಮಾನವನ ಸಮಾಜದ ಅಭಿವೃದ್ಧಿಯಲ್ಲಿ ತಂತ್ರಜ್ಞಾನದ ಪಾತ್ರ ಅನನ್ಯ. ಕೃಷಿಯಿಂದ ಕೈಗಾರಿಕೆಯವರೆಗೆ, ಶಿಕ್ಷಣದಿಂದ ವೈದ್ಯಕೀಯದವರೆಗೆ, ಸಂವಹನದಿಂದ ಮನರಂಜನೆಯವರೆಗೆ ಎಲ್ಲ ಕ್ಷೇತ್ರಗಳಲ್ಲಿಯೂ ತಂತ್ರಜ್ಞಾನ ಇಂದು ಅಸ್ತಿತ್ವದ ಅವಿಭಾಜ್ಯ ಅಂಗವಾಗಿದೆ. ಕಂಪ್ಯೂಟರ್, ಇಂಟರ್ನೆಟ್, ಮೊಬೈಲ್, ಕೃತಕ ಬುದ್ಧಿಮತ್ತೆ (AI) ಇವುಗಳ ಮೂಲಕ ಮಾನವ ಜೀವನವು ಸುಲಭ, ವೇಗ ಹಾಗೂ ಆರಾಮದಾಯಕವಾಗಿದೆ.

**ಸೃಜನಶೀಲತೆಯ ಅವಸಾನ:**

ಇಂದಿನ ಯುಗದಲ್ಲಿ ತಂತ್ರಜ್ಞಾನ ತುಂಬಾ ವೇಗವಾಗಿ ಅಭಿವೃದ್ಧಿ ಪಡುತ್ತಿದೆ ಹಾಗೂ ಮನುಷ್ಯರ ಜೀವನವನ್ನು ಸುಲಭಗೊಳಿಸುತ್ತವೆ. ಆದರೆ ಈ ಸುಲಭತೆ ಮನುಷ್ಯನ ಸ್ವತಃ ಸೃಜನಶೀಲತೆಯನ್ನು ಕೆಲವು ಮಟ್ಟದಲ್ಲಿ ಕಡಿಮೆ ಮಾಡುತ್ತಿದೆ. ಹೇಗೆಂದರೆ, ಹಳೆಯ ದಿನಗಳಲ್ಲಿ ಜನ ತಮ್ಮ ಕಲ್ಪನೆ ಮತ್ತು ಶ್ರದ್ಧೆಯಿಂದ ಕಥೆ ಬರೆಯುತ್ತಿದ್ದರು, ಚಿತ್ರ ಬಿಡಿಸುತ್ತಿದ್ದರು, ಶಿಲ್ಪ ಕಲೆ ಮಾಡುತ್ತಿದ್ದರು. ಆದರೆ ಇತ್ತೀಚೆಗೆ (AI) ಸಾಧನಗಳ ಮೂಲಕ ಕೆಲವೇ ಕ್ಷಣದಲ್ಲಿ ಅವುಗಳನ್ನು ತಯಾರಿಸಬಹುದು. ಈ ಸಂದರ್ಭದಲ್ಲಿ ಮನುಷ್ಯ ತನ್ನ ಸ್ವತಃ ಕಲ್ಪನೆ, ಶ್ರದ್ಧೆ ಮತ್ತು ತನ್ನಲ್ಲಿರುವ ಬುದ್ಧಿಶಕ್ತಿಯನ್ನು ಅಲ್ಪ ಮಟ್ಟದಲ್ಲಿ ಮಾತ್ರ ಬಳಸುತ್ತಿದ್ದಾರೆ.

ಉದಾಹರಣೆಗಾಗಿ, ತಕ್ಷಣದ ಫಲಿತಾಂಶಕ್ಕಾಗಿ ಅವಲಂಬನೆ, ಕಲ್ಪನೆ ತಗ್ಗು ಹಾಗೂ ಆತ್ಮವಿಶ್ವಾಸದ ಹಾನಿ ಹೀಗೆ ನಾನಾ ರೀತಿಯಲ್ಲಿ ತಂತ್ರಜ್ಞಾನದಿಂದ ಸೃಜನಶೀಲತೆಯನ್ನು ಮರೆಯುತ್ತಿದ್ದ ಜನರು ತಮ್ಮ ಅಸ್ತಿತ್ವವನ್ನು ತಾವು ಕಳೆದುಕೊಳ್ಳುತ್ತಿದ್ದಾರೆ.

ತಂತ್ರಜ್ಞಾನದ ಹಾಗೂ ಸೃಜನಶೀಲತೆಯ ಹೊಂದಾಣಿಕೆ ಮತ್ತು ಒಳ್ಳೆಯ ಪರಿಣಾಮಗಳು

**1) ಜ್ಞಾನಕ್ಕೆ ತ್ವರಿತ ಪ್ರವೇಶ**

ಆಲೋಚನೆಗೆ ಬೇಕಾದ ಮೌಲ್ಯಪೂರ್ಣ ಮಾಹಿತಿಯನ್ನು ಶೀಘ್ರವಾಗಿಯೇ ಪಡೆದುಕೊಳ್ಳಬಹುದು. ಈ ಮೂಲಕ ಕಾದಂಬರಿಗಳನ್ನು, ಶಾಸ್ತ್ರೀಯ ಕಾರ್ಯಗಳನ್ನು ಮತ್ತಷ್ಟು ಶಿಕ್ಷಣಮಯವಾಗಿ ರಚಿಸಬಹುದು.

**2) ಸಹಯೋಗ ಮತ್ತು ಜಾಲತಂತ್ರ**

ಪರಸ್ಥಳಗಳಲ್ಲಿ ಕೆಲಸ ಮಾಡುವವರು ಒಗ್ಗೂಡಿಕೊಂಡು ದೊಡ್ಡ ಯೋಜನೆಗಳನ್ನು ಅನುಷ್ಠಾನಗೊಳಿಸಬಹುದು. ವಿವಿಧ ದೃಷ್ಟಿಕೋನಗಳನ್ನು ಸೇರಿಸಬಹುದು ಹಾಗೂ ಒಬ್ಬರ ವಿಚಾರ ಶಕ್ತಿಯನ್ನು ಮತ್ತೊಬ್ಬರು ತಿಳಿದುಕೊಳ್ಳಬಹುದು ಹಾಗೂ ದೂರದಲ್ಲಿರುವ ಸಮಸ್ಯೆಗಳನ್ನು ಜಾಲತಾಣಗಳ ಮೂಲಕ ಕೂಡಲೇ ಬಗೆಹರಿಸಬಹುದು.

**3) ಹೊಸ ಮಾಧ್ಯಮಗಳು ಮತ್ತು ಸಾಧನೆಗಳು**

ಡಿಜಿಟಲ್ ಕಲೆ, ಸಂಯೋಜಿತ ಸಂಗೀತ ತಂತ್ರಗಳು ಮತ್ತು ಇತರ ತಂತ್ರಜ್ಞಾನ ಸಾಧನಗಳು ಹೊಸ ರಚನೆಯ ದಾರಿ ತೆರೆದಿವೆ. ಅಂದರೆ ಹೊಸದಾಗಿ ಬಂದಿರುವ ತಂತ್ರಜ್ಞಾನದಿಂದ ಮನುಷ್ಯನ ದಿನನಿತ್ಯ ಕೆಲಸ ಕಾರ್ಯಗಳು ಸುಲಭವಾಗಿಸುವಲ್ಲಿ ಇವು ಮಹತ್ವದ ಪಾತ್ರವನ್ನು ವಹಿಸಿದೆ.

**ದುಷ್ಪರಿಣಾಮಗಳು:**

**1) ಅನುಭವದ ಕೊರತೆ**

ತಂತ್ರಜ್ಞಾನದ ಪರಿಣಾಮದಿಂದ ಅನುಭವವು ಕ್ಷೀಣಿಸುತ್ತಿದೆ. ಅಂದರೆ, ಗೂಗಲ್‌ನಲ್ಲಿ ಯಾವುದೇ ರೀತಿಯ ಉತ್ತರವನ್ನು ನೇರವಾಗಿ ಅಲ್ಪಸಮಯದಲ್ಲಿ ಹುಡುಕಾಡುವ ಜನರು ಆಲೋಚನೆಗೆ ಸಮಯ ನೀಡದೆ ಕಲ್ಪನಾಶಕ್ತಿಯನ್ನು, ಆಲೋಚನಾಶಕ್ತಿಯನ್ನು ಕಳೆದುಕೊಳ್ಳುತ್ತಿದ್ದಾರೆ.

**2) ಕಾಪಿ ಪೇಸ್ಟ್ ಸಂಸ್ಕೃತಿ**

ಮೌಲ್ಯಯುತವಾದ ವಿಚಾರಗಳನ್ನು, ಸಂದೇಶವನ್ನು ಓದುವ ಬದಲು ಅದನ್ನು ತ್ವರಿತವಾಗಿ ಕಾಪಿ ಪೇಸ್ಟ್ ಮಾಡಿ ನಕಲು ಮಾಡಿ ಬಳಸುತ್ತಿರುವುದನ್ನು ನೋಡುತ್ತೇವೆ. ಇದರಿಂದ ಜನರ ಜ್ಞಾಪಕ ಶಕ್ತಿ ಕುಂದುತ್ತಿದ್ದು, ಎಲ್ಲವನ್ನು ಮರೆತು ಹೋಗುತ್ತಿದ್ದಾರೆ.

**3) ಸ್ವಯಂ ಪ್ರಮಾಣ ಕುಗ್ಗುವಿಕೆ**

ಕೈಯಲ್ಲಿ ಲೆಕ್ಕಾಚಾರ ಮಾಡುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಿದ್ದಾರೆ. ಅಂದರೆ, ಮೊದಲಿನ ಕಾಲದ ಜನರು ತಂತ್ರಜ್ಞಾನವಿಲ್ಲದೆ ಲೆಕ್ಕಾಚಾರಗಳನ್ನು ಹೇಳಿಕೊಡುತ್ತಿದ್ದರು ಹಾಗೂ ಸಮಯವನ್ನು ಸೂರ್ಯನ ದಿಕ್ಕಿನಿಂದ ಕಂಡುಕೊಳ್ಳುತ್ತಿದ್ದರು. ಆದರೆ ಈಗ ತಂತ್ರಜ್ಞಾನದಿಂದ ಸಣ್ಣ ಸಣ್ಣ ಲೆಕ್ಕಾಚಾರ ಹಾಗೂ ಸಮಯವನ್ನು ನೋಡಲು ಸಹ ತಂತ್ರಜ್ಞಾನದ ಅವಲಂಬಿತರಾಗಿದ್ದೇವೆ.

**4) ಕಲಾ ಮತ್ತು ವೃತ್ತಿ ಕ್ಷೇತ್ರಗಳ ಅವಸಾನ**

ಕಲಾ ಮತ್ತು ವೃತ್ತಿ ಕ್ಷೇತ್ರಗಳು ಅವಸಾನ ಹೊಂದುವುದಕ್ಕೆ ಕಾರಣವೇ ತಂತ್ರಜ್ಞಾನ. ಮನುಷ್ಯರು ತಮ್ಮ ಹೊಸ ಹೊಸ ಆಲೋಚನೆಗಳನ್ನು ಮರೆತು ತಂತ್ರಜ್ಞಾನದ ಕೈ ಹಿಡಿಯುತ್ತಿದ್ದಾರೆ. ಆದರೆ ಮೊದಲಿನ ಕಾಲದ ಜನರು ತಂತ್ರಜ್ಞಾನವಿಲ್ಲದಿದ್ದರೂ ಅತ್ಯಂತ ಅದ್ಭುತವಾಗಿ ಶಿಲ್ಪ ಕಲೆಯ ಕೆತ್ತನೆಯನ್ನು ಹಾಗೂ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಉದಾ : ಹಂಪಿ ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು ಮತ್ತು ಐಹೊಳೆ, ಬಾದಾಮಿ ಮುಂತಾದವು. ವೃತ್ತಿ ಕ್ಷೇತ್ರಗಳಲ್ಲಿ ಕಲಾವಿದರ ಕಲೆಯನ್ನು ಈಗ (AI) ಅಭಿವೃದ್ಧಿಪಡಿಸುತ್ತಿರುವ ಕಂಪ್ಯೂಟರ್‌ಗಳು ಎಲ್ಲರ ಕೆಲಸಗಳು ಕಸಿದುಕೊಳ್ಳುತ್ತಿವೆ.

**5) ಯಂತ್ರ ಬುದ್ಧಿ ವಿರುದ್ಧ ಮಾನವ ಬುದ್ಧಿ**

ಯಂತ್ರಗಳು ಶೀಘ್ರವಾಗಿ ಹಾಗೂ ನಿರ್ದಿಷ್ಟವಾಗಿ ಕೆಲಸ ಮಾಡುತ್ತವೆ. ಆದರೆ ಮಾನವನ ಸೃಜನಶೀಲತೆ, ಕಲ್ಪನೆ, ಭಾವನೆ ಮತ್ತು ನವೀನ ಆವಿಷ್ಕಾರದ ಶಕ್ತಿ ಯಂತ್ರಗಳಿಗೆ ಇಲ್ಲ. ತಂತ್ರಜ್ಞಾನದ ಅತಿಯಾದ ಬಳಕೆ, ಮಾನವನು ಯಂತ್ರದ ಅಧೀನನಾಗುವಂತೆ ಮಾಡುತ್ತಿದೆ. ಈ ಪ್ರಕ್ರಿಯೆಯಲ್ಲಿ ಅವನ ಸ್ವಂತ ಸೃಜನಶೀಲತೆ ನಿಧಾನವಾಗಿ ಅಳಿದು ಹೋಗುತ್ತಿರುವುದು ಸ್ಪಷ್ಟ.

ತಂತ್ರಜ್ಞಾನವನ್ನು ಸಂಪೂರ್ಣವಾಗಿ ತಿರಸ್ಕರಿಸುವುದು ಅಸಾಧ್ಯ. ಆದರೆ ತಂತ್ರಜ್ಞಾನವನ್ನು ಜಾಣ್ಮೆಯಿಂದ ಬಳಸುವುದರಿಂದ ಮಾತ್ರ ಸೃಜನಶೀಲತೆಯನ್ನು ಉಳಿಸಿಕೊಳ್ಳಬಹುದು. ತಂತ್ರಜ್ಞಾನ ಮಾನವನಿಗೆ ದೈವದ ವರದಾನವಷ್ಟೇ ಆದರೆ ಅದು ಸೃಜನಶೀಲತೆಯ ಶತ್ರುವಾಗಬಾರದು. ಯಂತ್ರ ಬುದ್ಧಿಯು ಮಾನವ ಬುದ್ಧಿಗೆ ಪೂರಕವಾಗಬೇಕು, ಆದರೆ ಅದೇ ಪರ್ಯಾಯವಾಗಬಾರದು. ಅಂದರೆ ಮಾತ್ರ ಸೃಜನಶೀಲತೆಯ ಅವಸಾನವನ್ನು ತಡೆಯಲು ಸಾಧ್ಯ.

**ಪರಾಮರ್ಶನ ಗ್ರಂಥಗಳು:**


1. ಶಿವಕುಮಾರ್ ಎಸ್.ಕೆ, (2018), ಶೈಕ್ಷಣಿಕ ತಂತ್ರಜ್ಞಾನ, ವಿಸ್ಮಯ ಪ್ರಕಾಶನ, ಬೆಂಗಳೂರು.
2. ಸುರೇಶ ಕೆ.ಎಂ., (2024, 09) ಸಾಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ, ಸ್ಪರ್ಧಾ ವಿಜೇತ ಪ್ರಕಾಶನ, ಬೆಂಗಳೂರು.
3. ಪದ್ಮಪ್ರಸಾದ ಎಸ್.ಪಿ., (2019), ಶಿಕ್ಷಣದಲ್ಲಿ ಮಾಹಿತಿ ಮತ್ತು ತಂತ್ರಜ್ಞಾನ, ಅನನ್ಯ ಪ್ರಕಾಶನ, ತುಮಕೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.